MVC No. 256/2021 PW-**2**

**ದಿನಾಂಕ 09.01.2025 ರಂದು ಸಾಕ್ಷಿಯನ್ನು ಕರೆಯಿಸಿ, ಪ್ರಮಾಣ ವಚನ ಬೋಧಿಸಲಾಯಿತು.**

ಮುಖ್ಯ ವಿಚಾರಣೆಃಅರ್ಜಿದಾರರ ಪರ ಶ್ರೀ ಹೆಚ್ ಕೆ ವಕೀಲರಿಂದಃ

ಸಾಕ್ಷಿ ಪ್ರಮಾಣ ಪತ್ರದಲ್ಲಿ ತಿಳಿಸಿರುವ ಎಲ್ಲಾ ವಿಷಯಗಳು ಸತ್ಯವಾಗಿರುತ್ತದೆ ಅದನ್ನು ನನ್ನ ಸಾಕ್ಷ್ಯವೆಂದು ಪರಿಗಣಿಸಲು ಕೋರಿಕೊಳ್ಳುತ್ತೇನೆ. ಅರ್ಜಿಗೆ ಸಂಬಂದಪಟ್ಟಂತೆ ಹೊರ ರೋಗಿ ದಾಖಲಾತಿಯನ್ನು, ನಿಪಿ-17 ಎಂದು, ಡಿಸ್ ಚಾರ್ಜ್ ಸಮ್ಮರಿಯನ್ನು ನಿಪಿ-18 ಎಂದು, 2 ಕ್ಷಕಿರಣವನ್ನು ಒಟ್ಟಾರೆಯಾಗಿ ನಿಪಿ-19 ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ ಎದುರುದಾರರ ಪರ ಶ್ರೀ ಎಸ್ ವೈ ಎಸ್ ವಕೀಲರಿಂದಃ

ಅಪಘಾತವಾದ ನಂತರ ಅರ್ಜಿದಾರರು ನಮ್ಮ ಆಸ್ಪತ್ರೆಗೆ ಬಂದಿಲ್ಲ. ನಾನು ಎಂ ಎಲ್ ಸಿ ಮಾಡಿಲ್ಲ. ನಾನು ಅರ್ಜಿದಾರರಿಗೆ ಮುಂದುವರೆದ ಚಿಕಿತ್ಸೆ ನೀಡಿರುತ್ತೇನೆ. ನಾನು ಅರ್ಜಿದಾರರಿಗೆ ಶಸ್ತ್ರ ಚಿಕಿತ್ಸೆ ಮಾಡಿಲ್ಲ. ಅರ್ಜಿದಾರರು ಸಂತೋಷ್ ಆಸ್ಪತ್ರೆಯಲ್ಲಿ ದಾಖಲಾಗಿದ್ದರು. ಅರ್ಜಿದಾರರಿಗೆ ಮೂಳೆಗಳು ಕೂಡಿಕೊಂಡಿವೆ. ಅರ್ಜಿದಾರರಿಗೆ ಅಂಗ ನ್ಯೂನ್ಯತೆ ನಾನು ಹೇಳುವುದರಲ್ಲಿ 1/3 ರಷ್ಟು ಬರುತ್ತದೆ ಎಂದರೆ ಸುಳ್ಳು. ನಾನು ಅರ್ಜಿದಾರರಿಗೆ ಶಸ್ತ್ರ ಚಿಕಿತ್ಸೆ ಮಾಡಿಲ್ಲದೇ ಇರುವುದರಿಂದ ಅಂಗ ನ್ಯೂನ್ಯತೆ ಹೇಳಲು ಬರುವುದಿಲ್ಲ ಎಂದರೆ ಸುಳ್ಳು. ಅಂಗ ನ್ಯೂನ್ಯತೆ ಮಾಡಲು ಬೇರೆ ವೈದ್ಯಾಧಿಕಾರಿಯವರು ನನಗೆ ಅಧಿಕಾರ ಪತ್ರ ನೀಡಿಲ್ಲ. ನಾನು ಸುಳ್ಳು ಅಂಗ ನ್ಯೂನ್ಯತೆ ನಿರ್ಧರಣೆ ಮಾಡಿರುತ್ತೇನೆಂದರೆ ಸುಳ್ಳು. ಸಂಪೂರ್ಣ ದೇಹಕ್ಕೆ ಶೇಕಡಾ 2-3 ರಷ್ಟು ಅಂಗ ನ್ಯೂನ್ಯತೆ ಬರುತ್ತದೆ ಎಂದರೆ ಸುಳ್ಳು. ನಾನು ಅರ್ಜಿದಾರರಿಗೆ ಹೆಚ್ಚಿನ ಪರಿಹಾರ ಬರಲೀ ಎಂದು ಹೆಚ್ಚಿನ ಅಂಗ ನ್ಯೂನ್ಯತೆಯನ್ನು ತೋರಿಸಿದ್ದೇನೆಂದರೆ ಸುಳ್ಳು.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಗಣಕೀಕರಣ ಮಾಡಲಾಯಿತು)**Na**

ಓ.ಹೇ.ಕೇ.ಸ.ಒ

(ವೆಂಕಟೇಶಪ್ಪ. ವಿ)
ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ.,ಚನ್ನಪಟ್ಟಣ.